1890ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 177.

ಚಿಕ್ಕನಾಯಿಕನ ಹಳ್ಳೀಲಿ ಮೃತಪಟ್ಟ ಕಿದ್ದವುಲ್ಲಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ವೀರಭದ್ರಯ್ಯ ಮೈನರು, ಗಾರ್ಡಿಯರ್ ಮತ್ತು ವುಪ್ಪನಯ್ಯ ಮೃತಪಟ್ಟ ಸದರೀ ಕಿದ್ದವುಲ್ಲಯ್ಯನಿಗೆ ದತ್ತು ಮಗನು ಆಗಬೇಕೆಂಬ ಹಕ್ಕು ದಾರೀ ಮೇಲೆ ಸದರೀ ಸ್ಥಳದ ವುಪ್ಪಸಯ್ಯನು ಚಿಕ್ಕನಾಯಿಕನ ಹಳ್ಳೀ ವಾಸಸ್ಥನಾಗಿ ಮೃತಪಟ್ಟ ಕಿದ್ದವುಲ್ಲಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವುಪ್ಪನಯ್ಯನ ಅರ್ಜೀಯನ್ನು 1890ನೇ ಇಸವಿ ಡಿಸಂಬರ್ ತಿಂಗಳು ತಾರೀಖು 20ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಿದ್ದವುಲ್ಲಯ್ಯನ ಆಸ್ತಿಗೆ ಹಕ್ಕು ದಾರರಾದ ವಿಷ್ಟರೂ ಈ ಕೋರ್ಟನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1890ನೇ ಇಸವಿ ನವಂಬರ್ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಬೆಂಳೂರು ಡಿಸ್ಟ್ರಿಕ್ಟು.

ತಾರೀಖು 20ನೇ ನವಂಬರ್ 1890.

ನಂ. 1. ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನೆಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೊಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಸುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಜೇರಬೇರೆಯಾಗಿ ಮಂಜೂರು ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ ಡಿಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತಿಯನ್ನೂ ಜೇರೆ ಜೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರಜೂ ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜ್ ಮುವ್ಕೂಫ್ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜು ಖಾಯಂಮಾಡಲ್ಪಟ್ಟ ಕೂಡ್ಲೆ ಗ್ರಾಮವು ಅತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜೂ ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಅತನಿಗೆ ಕೊಡಲ್ಪಡುವದು. ತಕರೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಿ ಆಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ದಿವಾಣರವರಿಗೆ ಅಪ್ಪೀಲು ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲಿನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀ ದಾರರ ಹೆಸರು.	ಅಂದಾಜು ಬೀಜವರಿ.	ಅಂದಾಜು ಹುಟ್ಟುವಳಿ ಯಾ ಜೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕಿ ಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
					ಎಕರೆ. ಗುಂ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಬೆಂಗಳೂರು.	ದೇವನಹಳ್ಳಿ	ಹಂದಿಗೊ	ಜೋಡಿ ಶಾನಪ್ಪನಹಳ್ಳಿ	ಶ್ರೀನಿವಾಸರಾವ್ ವ್ಯಾಸರಾವ್, ಜಯರಾವ್, ಶ್ರೀನಿವಾಸಾಚಾರ್ರು ಅಂಣಯ್ಯಾಚಾರ್ರು ವಗೈರೆ	197 14	228 7 0	58 4 6	130 3 9 ಮತ್ತು ಹರಾಜು ತಾರೀಖು ವರಿವಿಗೆ ಆಗುವ ಬಡ್ಡಿ	7—1—91 ಆಮಲ್‌ದಾರ್ರು ರೂಬರೂ ತಾಲ್ಲೂಕು ಕಚೇರಿಯಲ್ಲಿ.
			ಜೋಡಿ ಸೂದಹಳ್ಳಿ	ಅಪ್ಪಾಜಿಪಂಡಿತ ತಕೃಷ್ಣಪಂಡಿತ, ನಂಜುಂಡಪಂಡಿತ, ಧರ್ಮಮ್ಮ ವಗೈರೆ	969 16	735 12 0	277 15 9	314 3 7 ಮತ್ತು ಹರಾಜು ತಾರೀಖು ವರಿವಿಗೆ ಆಗುವ ಬಡ್ಡಿ	8—1—91 ಆಮಲ್‌ದಾರ್ರು ರೂಬರೂ ತಾಲ್ಲೂಕು ಕಚೇರಿಯಲ್ಲಿ.
			ಜೋಡಿ ದೊಡ್ಡಗೊಲ್ಲಹಳ್ಳಿ	ಬಾಬುಚಾರ್ರು ಮಧ್ವಾಚಾರ್ರು ನರಸಿಹ್ಮಚಾರ್ರು ರಾಘವೇಂದ್ರಾಚಾರ್ರು ವಗೈರೆ	422 5	351 8 0	187 15 6	291 1 7 ಮತ್ತು ಹರಾಜು ತಾರೀಖು ವರಿವಿಗೆ ಆಗುವ ಬಡ್ಡಿ	9—1—91 ಅಮಲ್‌ದಾರ್ರು ರೂಬರೂ ತಾಲ್ಲೂಕು ಕಚೇರಿಯಲ್ಲಿ.
	ದೊಡ್ಡಬಳ್ಳಾಪುರ	ಹೊಸಕೋಟೆ	ಜೋಡಿ ಮಾವಳೀಪುರ	ಗುರಾವ್ ಸದಾಶಿವರಾವ್, ನಂಜಕಮ್ಮ, ಚಲ್ಲಪ್ಪ ವಗೈರೇರು	743 25	460 12 0	404 12 9	984 12 9 ಮತ್ತು ಹರಾಜು ತಾರೀಖು ವರಿವಿಗೆ ಆಗುವ ಬಡ್ಡಿ ನೋಟೀಸ್ ಫೀ	6—1—91 ಅಮಲ್‌ದಾರ್ರು ರೂಬರೂ ತಾಲ್ಲೂಕು ಕಚೇರಿಯಲ್ಲಿ.

ಷರಾ.—ಜೋಡೀ ದಾರರುಗಳೆಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಾಗಲಿ ಉಂಟು ಮಾಡಲ್ಪಟ್ಟ ತಮಾಂ ಹಿಡುವಳಿಗಳಿಗೂ ದೇಣಿಗೆಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರೀ ಹರಾಜ್ ವಳಪಟ್ಟಿರುವದಿಲ್ಲ.

ಮೇಲ್ಕಂಡ ಜೋಡೀ ಗ್ರಾಮಗಳ ಹಿಡುವಳಿಯನ್ನ ಸರಕಾರಕ್ಕೆ ಕೇರಿಸಿಕೊಂಡಿರುತ್ತೆ.

ವಿ. ಪಿ. ಮಾಧವರಾವ್,
ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಸೆಶ್ ಜಡ್ಜ್‌ರಿಯವರ ಕೋರ್ಟ್‌ನಲ್ಲಿ.

1890ನೇ ಇಸವಿ ಅರ್ಜೀ ನಂಬರ್ 305.

ಮೃತಪಟ್ಟ ಪಾಳ್ಯದ ನಾರಾಯಣಶಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ರಾಮಸ್ವಾಮಿಶಟ್ಟಿಯು, ಮೃತಪಟ್ಟ ಸದರೀ ನಾರಾಯಶಟ್ಟರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಆರಕಲ್ ಗೂಡು ಈಸಬಾ ಸ್ಥಳದ ಸದರೀ ರಾಮಸ್ವಾಮಿಶಟ್ಟರು ಸದರೀ ವಾಸಸ್ಥರಾಗಿ ಮೃತಪಟ್ಟ ನಾರಾಯಣಶಟ್ಟರ ಜಿಂದಗೀ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಯು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಸ್ವಾಮಿಶಟ್ಟರ ಅರ್ಜಿಯನ್ನು 1890ನೇ ಇಸವಿ ಡಿಸಂಬರ್ 3ನೇ ತಿಂಗಳು ತಾರೀಖು 19ನ್ನು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಾಯಣಶಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟ್ಯರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಅರ್ಜೀ ನಂಬರ್ 311.

ಮೃತಪಟ್ಟ ಶ್ರೀರಂಗಪಟ್ಟಣದ ಲೇಟ್ ಮುನಸೀಫ್ ಬಿ, ನರಸಿಂಹಯ್ಯಂಗಾರ್ಯರವರ ಆಸ್ತೀ ವಿಷಯದಲ್ಲಿ—

ಅರ್ಜೇದಾರ 1ನೇ ರಂಗಯ್ಯಂಗಾರ್ 2ನೇ ತಿಮಪ್ಪ 3ನೇ ಕೃಷ್ಣಯ್ಯಂಗಾರ್, ಮೈನರ್ ಗಾರ್ಡಿಯರ್ ಇವರುಗಳ ತಾಯಿ ವೇದನಾಯಿಕಮ್ಮನವರು ಮೃತಪಟ್ಟ ಸದರೀ ನರಸಿಂಹಯ್ಯಂಗಾರ್ಯರಿಗೆ ಮಕ್ಕಳು ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು